ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೧**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**

**ಮಂಗಳವಾರ, ದಿನಾಂಕ: ೨೭ನೇ ಜನವರಿ, ೨೦೨೬**

---

**ಸಮೂಹ – II**

೧. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಮತ್ತು ಹಜ್ ಸಚಿವರು

೬. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

---

## ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿನ ಒಳಚರಂಡಿ ಯೋಜನೆ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) –**

೧ (೪೭) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ನಗರಾಭಿವೃದ್ಧಿ ಮತ್ತು ಒಳಚರಂಡಿ ಮಂಡಳಿ ಅಡಿಯಲ್ಲಿ ಕೈಗೊಂಡಿರುವ ಒಳಚರಂಡಿ ಯೋಜನೆಯ ಕಾಮಗಾರಿ ನಿಗದಿತ ಸಮಯದಲ್ಲಿ

ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾಮಗಾರಿ ಪೂರೈಸದ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ; ಕೈಗೊಂಡಿದ್ದಲ್ಲಿ ಅದರ ಪೂರ್ಣ ವಿವರಗಳನ್ನು ಒದಗಿಸುವುದು ;

(ಆ) ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಕರಾರು ಸಂಖ್ಯೆ:೭/೨೦೨೨–೨೩ ರಿಂದ ಇಲ್ಲಿಯವರೆಗೆ ಇಲಾಖೆ ಮತ್ತು ಗುತ್ತಿಗೆದಾರರ ನಡುವೆ ಪತ್ರ ವ್ಯವಹಾರ ನಡೆದಿದೆಯೇ; ನಡೆದಿದ್ದಲ್ಲಿ, ಅದರ ಪೂರ್ಣ ವಿವರಗಳನ್ನು ಒದಗಿಸುವುದು ;

(ಇ) ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯ ಒಳಚರಂಡಿ ಕಾಮಗಾರಿ ಸಂಬಂಧ ೧೩–೦೭–೨೦೨೨ ರಿಂದ ಇಲ್ಲಿಯವರೆಗೆ ಮಂಡಳಿಯ ಎಇಇ, ಇಇ ಮತ್ತು ಮುಖ್ಯ ಇಂಜಿನಿಯರ್ ಸ್ಥಳ ವೀಕ್ಷಣೆ ಮಾಡಿರುತ್ತಾರೆಯೇ ; ಮಾಡಿದ್ದಲ್ಲಿ, ಅದರ ಪೂರ್ಣ ವರದಿಗಳನ್ನು ಮತ್ತು ಕಾಮಗಾರಿ ಪ್ರಗತಿಯ ವಿವರಗಳನ್ನು ಒದಗಿಸುವುದು ;

(ಈ) ಒಳಚರಂಡಿ ಕಾಮಗಾರಿಯಲ್ಲಿ ಗುತ್ತಿಗೆದಾರರು ಕಾಮಗಾರಿಯ ಪ್ರಗತಿ ವರದಿ ನೀಡಿದ್ದಾರೆಯೇ ? (ಆಡಳಿತ ಮಂಡಳಿಯಲ್ಲಿ ಅನುಮೋದನೆಗೊಂಡ ವಿವರಗಳನ್ನು ಒದಗಿಸುವುದು)

## ಮೈಸೂರು ಜಿಲ್ಲೆಯಲ್ಲಿ ನಗರೋತ್ಥಾನ ಯೋಜನೆ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨ (೨೮) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರೋತ್ಥಾನ ಯೋಜನೆಯ ೪ನೇ ಹಂತದ ಅಡಿಯಲ್ಲಿ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ;

(ಆ) ಈ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ ಕೈಗೊಂಡ ಕಾಮಗಾರಿಗಳಾವುವು ;

(ಇ) ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿಧಿಸಲಾಗಿರುವ ಕಾಲಮಿತಿ ಏನು ;

(ಈ) ಮೈಸೂರು ಜಿಲ್ಲೆಯ ಕೆಲವು ಪುರಸಭೆಗಳಲ್ಲಿ ಅನುದಾನ ಬಿಡುಗಡೆಯಾಗಿದ್ದರೂ ಟೆಂಡರ್ ಪ್ರಕ್ರಿಯೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ತ್ವರಿತಗೊಳಿಸಲು ವಿಶೇಷ ಅಧಿಕಾರಿಯನ್ನು ನೇಮಿಸಲಾಗುವುದೇ ?

## ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ನೌಕರರುಗಳು ತೆರಿಗೆ ಹಣವನ್ನು ದುರುಪಯೋಗ ಮಾಡಿಕೊಂಡಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩ (೨೬) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿನ ವಾರ್ಡ್ ನಂ.೧೯ರಲ್ಲಿನ ಅಪಾರ್ಟ್‌ಮೆಂಟ್ ಪ್ಲಾಟ್‌ಗಳ ಆಸ್ತಿ ತೆರಿಗೆಯಲ್ಲಿ ಕರ ಸಂಗ್ರಹಿಸಿ ಪಾಲಿಕೆಯ ಖಾತೆಗೆ ಜಮಾ ಮಾಡದೆ ದುರುಪಯೋಗ ಮಾಡಿಕೊಂಡಿರುವ ಅಧಿಕಾರಿ/ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆ ಕೈಗೊಂಡಿರುವುದು ನಿಜವೇ ; (ವಿವರಗಳನ್ನು ಒದಗಿಸುವುದು)

(ಆ) ಈ ಇಲಾಖಾ ವಿಚಾರಣೆಯು ಯಾವ ಹಂತದಲ್ಲಿದೆ ; ಇಲ್ಲಿಯವರೆಗೆ ಎಷ್ಟು ವಿಚಾರಣಾ ಸಭೆಗಳನ್ನು ನಡೆಸಿದೆ ; ಇದರಲ್ಲಿ ಕಂಡು ಬಂದ ಅಂಶಗಳೇನು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಸುಮಾರು ೨.೮೦ ಲಕ್ಷಗಳಷ್ಟು ಹಣ ದುರುಪಯೋಗ ಮಾಡಿರುವ ಈ ಅಧಿಕಾರಿ/ಸಿಬ್ಬಂದಿಗಳನ್ನು ಪಾಲಿಕೆಯಲ್ಲಿಯೇ ಪುನರ್ ಸ್ಥಾಪಿಸಲು ಕಾರಣವೇನು ; ಅಲ್ಲಿಯೇ ಪುನರ್ ಸ್ಥಾಪಿಸಿರುವುದರಿಂದ ಸಾಕ್ಷಿಗಳನ್ನು ತಿರುಚುವ ಸಂಭವವಿಲ್ಲವೇ ; ಹಾಗಿದ್ದಲ್ಲಿ, ಇಲಾಖೆ ಯಾವ ಕ್ರಮಕೈಗೊಳ್ಳುವುದು ; ಇದಕ್ಕೆ ಜವಾಬ್ದಾರರು ಯಾರು ;

(ಈ) ಈ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿಯ ಗಾಂಧಿ ನಗರ ಪೊಲೀಸ್ ಠಾಣೆಯಲ್ಲಿನ ಪ್ರಥಮ ವರ್ತಮಾನ ವರದಿ ಸಂಖ್ಯೆ ೦೧೩೫/೨೦೨೪ರ ಮೇಲೆ ಇಲ್ಲಿಯವರೆಗೂ ಆಗಿರುವ ವಿಚಾರಣಾ ಪ್ರಗತಿ ಏನು ; ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಲಾಗಿದೆಯೇ ; (ಮಾಹಿತಿ ಒದಗಿಸುವುದು)

(ಉ) ಈ ವಿಷಯದಲ್ಲಿ ಸರ್ಕಾರಿ ನೌಕರರುಗಳೇ ಇಲಾಖೆಗೆ ಮೋಸ ಮಾಡಿರುವುದು ಕಂಡು ಬರುತ್ತಿರುವುದರಿಂದ ಅಮಾಯಕ ಸಾರ್ವಜನಿಕರು ಸರ್ಕಾರಿ ನೌಕರರ ಮೂಲಕ ಕಟ್ಟಿರುವ ಆಸ್ತಿ ತೆರಿಗೆ ವಿಷಯದಲ್ಲಿ ಇಲಾಖೆಯ ಸ್ಪಷ್ಟ ನಿರ್ಧಾರಗಳೇನು ; ತೆರಿಗೆ ಕಟ್ಟಿರುವ ಇವರುಗಳಿಗೆ ನ್ಯಾಯ ನೀಡಲು ಹಾಗೂ ಇವರುಗಳ ಹಿತಾಸಕ್ತಿ ಕಾಪಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ವಿವರಗಳನ್ನು ಒದಗಿಸುವುದು)

## ರಾಜ್ಯದ ಮಹಾನಗರ ಪಾಲಿಕೆ ಹಾಗೂ ಇತರೆ ನಗರಸಭಾ ಪೌರಕಾರ್ಮಿಕರ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) –**

೪ (೬೪) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮಹಾನಗರ ಪಾಲಿಕೆಗಳು ನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಪ್ರಸ್ತುತ ಒಟ್ಟು ಎಷ್ಟು ಸಂಖ್ಯೆಯ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ ;

(ಆ) ಸದರಿ ಪೌರಕಾರ್ಮಿಕರಲ್ಲಿ ಖಾಯಂ (Permanent) ಮತ್ತು ಗುತ್ತಿಗೆ/ಹೊರಗುತ್ತಿಗೆ (Contract/Outsourced) ಆಧಾರದ ನೌಕರರ ಸಂಖ್ಯೆ ಎಷ್ಟು ; ಹಾಗೂ ಈ ಎರಡೂ ವರ್ಗದ ನೌಕರರಿಗೆ ಪ್ರಸ್ತುತ ಪಾವತಿಸಲಾಗುತಿರುವ ಮಾಸಿಕ ವೇತನ ಮತ್ತು ಇತರೆ ಭತ್ಯೆಗಳೇನು ;

(ಇ) ನಗರ ಸ್ಥಳೀಯ ಸಂಸ್ಥೆಗಳಲ್ಲಿ ದೀರ್ಘಕಾಲದಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಪೌರಕಾರ್ಮಿಕರನ್ನು ಹಂತ–ಹಂತವಾಗಿ ಖಾಯಂಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; ಈ ಯೋಜನೆಯಡಿ ಈವರೆಗೆ ಒಟ್ಟು ಎಷ್ಟು ಜನ ಗುತ್ತಿಗೆ ನೌಕರರನ್ನು ಸರ್ಕಾರ ಖಾಯಂಗೊಳಿಸಿದೆ ;

(ಈ) ರಾಜ್ಯದ ಪಾಲಿಕೆ ಮತ್ತು ಪಂಚಾಯಿತಿ ವ್ಯಾಪ್ತಿಗಳಲ್ಲಿ ಒಳಚರಂಡಿ (UGD) ಸ್ವಚ್ಛಗೊಳಿಸಲು ಪ್ರತ್ಯೇಕ ನೌಕರರನ್ನು ನಿಯೋಜಿಸಲಾಗಿದೆಯೇ ; ಹಾಗಿದ್ದಲ್ಲಿ, ಈ ವಿಭಾಗದಲ್ಲಿ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ವಿಶೇಷವಾಗಿ ಅತ್ಯಂತ ಅಪಾಯಕಾರಿ ಸನ್ನಿವೇಶದಲ್ಲಿ ಕೆಲಸ ಮಾಡುವ ಒಳಚರಂಡಿ (UGD) ಸ್ವಚ್ಛಗೊಳಿಸುವ ನೌಕರರನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಅವರನ್ನು ಖಾಯಂಗೊಳಿಸುವ ಅಥವಾ ಅವರಿಗೆ ಹೆಚ್ಚಿನ ಸೇವಾ ಭದ್ರತೆ ನೀಡುವ ಯಾವುದಾದರೂ ವಿಶೇಷ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?

## ಸಿಂಧನೂರು ನಗರಕ್ಕೆ 24X7 ಕುಡಿಯುವ ನೀರು ಸರಬರಾಜು ಕಾಮಗಾರಿಯ ಗುಣಮಟ್ಟ ಪರಿಶೀಲಿಸಲು ಸಮಿತಿಯನ್ನು ರಚಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೫ (೫೩) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ ಯೋಜನೆಯಡಿ ಸಿಂಧನೂರು ನಗರಕ್ಕೆ 24x7 ಕುಡಿಯುವ ನೀರು ಸರಬರಾಜು ಕಾಮಗಾರಿಯ ಗುಣಮಟ್ಟವನ್ನು

ಹಾಗೂ ವಾಸ್ತವಾಂಶಗಳನ್ನು ಪರಿಶೀಲಿಸಲು ಮಾನ್ಯ ಸಚಿವರು ಸದನದಲ್ಲಿ ನೀಡಿರುವ ಭರವಸೆಯಂತೆ ಯಾರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ ;

(ಆ) ಸದರಿ ಸಮಿತಿಯು ನೀಡಿರುವ ವರದಿಯಲ್ಲಿ ಯಾವ ಅಂಶಗಳು ಒಳಗೊಂಡಿವೆ ;

(ಇ) ಸದರಿ ಕಾಮಗಾರಿಯು ಸಂಪೂರ್ಣವಾಗಿ ಮುಕ್ತಾಯಗೊಂಡಿದೆಯೇ ;

(ಈ) ಇಲ್ಲವಾದಲ್ಲಿ, ಯಾವ ಕಾಲಮಿತಿಯೊಳಗೆ ಸಿಂಧನೂರು ನಗರಕ್ಕೆ 24x7 ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿಯು ಮುಕ್ತಾಯಗೊಳ್ಳುತ್ತದೆ ?

## ತೆಂಗಿನ ಮರ ಕೆಂಪುಮೂತಿಹುಳ ಮತ್ತು ಅಣಬೆ ರೋಗಕ್ಕೆ ತುತ್ತಾಗುತ್ತಿರುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೬ (೯೬) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ತುಮಕೂರು ಜಿಲ್ಲೆಯಲ್ಲಿ ತೆಂಗಿನ ಮರಗಳು ಕೆಂಪುಮೂತಿಹುಳ ಮತ್ತು ಅಣಬೆ ರೋಗಕ್ಕೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ರೋಗ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ರೋಗ ಲಕ್ಷಣ ಮತ್ತು ರೋಗಕ್ಕೆ ಔಷದೋಪಚಾರಕ್ಕಾಗಿ ರೈತರಿಗೆ ಸೂಕ್ತ ಮಾಹಿತಿ ನೀಡಲು ಐ.ಇ.ಸಿ. ಚಟುವಟಿಕೆಗಾಗಿ ಇಲಾಖೆಯು ಕೈಗೊಂಡಿರುವ ಕ್ರಮಗಳೇನು ;

(ಈ) ಕೆಂಪುಮೂತಿಹುಳ ಮತ್ತು ಅಣಬೆ ರೋಗಕ್ಕೆ ತುತ್ತಾಗಿ ಮರ ಮತ್ತು ಬೆಳೆ ನಷ್ಟವಾದರೆ ರೈತರಿಗೆ ಪ್ರತಿ ಮರಕ್ಕೆ ನೀಡುವ ಪರಿಹಾರದ ಮೊತ್ತವೆಷ್ಟು ; ಕಳೆದ ಮೂರು ವರ್ಷದಿಂದ ಸದರಿ ರೋಗಕ್ಕೆ ಬಲಿಯಾದ ಮರಗಳ ಸಂಖ್ಯೆ ಎಷ್ಟು ; ರೈತರಿಗೆ ನೀಡಿದ ಪರಿಹಾರವೆಷ್ಟು ? (ತಾಲ್ಲೂಕುವಾರು ವರ್ಷವಾರು ವಿವರ ನೀಡುವುದು)

## ತೋಟಗಾರಿಕೆ ಬೆಳೆಗಳಿಗೆ ನಷ್ಟ ಪರಿಹಾರ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೭ (೩೩) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತೋಟಗಾರಿಕೆ ಬೆಳೆಗಳು ಬೇಗನೆ ಹಾಳಾಗುವುದನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ 'ಶೈತ್ಯಾಗಾರ ಘಟಕ'ಗಳನ್ನು (Cold Storage) ಹೆಚ್ಚಿಸಲು ಸರ್ಕಾರ ನೀಡುತ್ತಿರುವ ಸಬ್ಸಿಡಿ ಎಷ್ಟು ; ಈ ವರ್ಷ ಎಷ್ಟು ಹೊಸ ಘಟಕಗಳಿಗೆ ಅನುಮೋದನೆ ನೀಡಲಾಗಿದೆ ;

(ಆ) ತೋಟಗಾರಿಕೆ ಇಲಾಖೆಯಡಿ ಹನಿ ನೀರಾವರಿ ಅಳವಡಿಸಿಕೊಳ್ಳಲು ರೈತರಿಗೆ ನೀಡಲಾಗುವ ಸಹಾಯಧನದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವಿಳಂಬವಾಗುವುದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಇಲಾಖೆಯಿಂದ ರಸ್ತೆಗಳಲ್ಲಿ ಬ್ಯಾನರ್ ಅಳವಡಿಸುವ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೮ (೨೭) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೌರಾಡಳಿತ ಇಲಾಖೆಯಿಂದ ನಗರದ ರಸ್ತೆಗಳಲ್ಲಿ ಬ್ಯಾನರ್ ಅಳವಡಿಸಲು ಇರುವ ನಿಯಮಗಳೇನು ; (ವಿವರ ಒದಗಿಸುವುದು)

(ಆ) ಚಿಕ್ಕಬಳ್ಳಾಪುರ ಶಿಡ್ಲಘಟ್ಟದಲ್ಲಿ ಬ್ಯಾನರ್ ವಿಷಯದಲ್ಲಾದ ಗಲಾಟೆಗೆ ಪೌರಾಡಳಿತ ಇಲಾಖೆಯ ಬೇಜಾವಾಬ್ದಾರಿ ಕಾರಣ ಎಂಬುದರ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಇ) ಬ್ಯಾನರ್, ಪೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸುವಾಗ ಪೌರಾಡಳಿತ ಇಲಾಖೆಯಿಂದ ಶುಲ್ಕ ಸಂಗ್ರಹಿಸಲಾಗುತ್ತಿದೆಯೇ ; ಇಲ್ಲವಾದಲ್ಲಿ ಸಂಗ್ರಹಿಸದಿರಲು ಕಾರಣವೇನು ;

(ಈ) ಅಳವಡಿಸಲಾದ ಬ್ಯಾನರ್, ಪೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಪೌರಕಾರ್ಮಿಕರಿಗೆ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡುವ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಉ) ಅನುಮತಿ ಪಡೆಯದೆ ಅಕ್ರಮವಾಗಿ ಬ್ಯಾನರ್, ಪೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸುವವರ ಮೇಲೆ ಕೈಗೊಂಡ ಕ್ರಮಗಳೇನು ; ಈ ಅಕ್ರಮಗಳಿಗೆ ಬಾರಿ ಪ್ರಮಾಣದ ದಂಡ ವಿಧಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ? (ವಿವರ ನೀಡುವುದು)

## ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯಿಂದ ನಿವೇಶನಗಳ ಹಂಚಿಕೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯ (೫೯) ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯಿಂದ ಕೈಗಾರಿಕಾ ಉದ್ದೇಶಗಳಿಗಾಗಿ ಎಷ್ಟು ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ ; ಕಳೆದ ೩ ವರ್ಷಗಳಿಂದ ನೀಡಿದ ಪರಿಹಾರವೆಷ್ಟು ; ಹೀಗೆ ವಶಪಡಿಸಿಕೊಂಡ

ಭೂಮಿಯನ್ನು ಕೈಗಾರಿಕಾ ಉದ್ದೇಶಗಳಿಗಾಗಿ ಅಭಿವೃದ್ಧಿಪಡಿಸಿ ಎಷ್ಟು ಹಂಚಿಕೆ ಮಾಡಲಾಗಿದೆ ; ಖಾಲಿಯಿರುವ ನಿವೇಶನಗಳೆಷ್ಟು ; ಅದಕ್ಕೆ ಕಾರಣಗಳೇನು ;

(ಆ) ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯಿಂದ ಕೆಐಎಡಿಬಿ ಮೂಲಕ ಸಿ.ಎ. ನಿವೇಶನಗಳ ಹಂಚಿಕೆ ನಿಯಮಗಳೇನು ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಸಿ.ಎ. ನಿವೇಶನಗಳನ್ನು ನೀಡಲಾಗಿದೆ ;

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾವೆಲ್ಲ ಪ್ರದೇಶಗಳಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ನಿವೇಶನ ಅಭಿವೃದ್ಧಿ ಪಡಿಸಲಾಗಿದೆ ; ಅವುಗಳಲ್ಲಿ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು ;

(ಈ) ಒಂದೇ ಸಂಸ್ಥೆಯ ಹೆಸರಿನಲ್ಲಿ ಬೇರೆ ಬೇರೆ ಯಾವ ಜಾಗಕ್ಕೆ ಸಿ.ಎ. ನಿವೇಶನಗಳನ್ನು ಗುರುತಿಸಿ ನೀಡಲಾಗಿದೆ ; ಸಿ.ಎ. ನಿವೇಶನಗಳನ್ನು ಯಾವ ಉದ್ದೇಶಗಳಿಗೆ ನೀಡಲಾಗುತ್ತದೆ ; ಸಿ.ಎ. ನಿವೇಶನಗಳ ಹಂಚಿಕೆಯ ಮಾನದಂಡಗಳೇನು ;

(ಉ) ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಎಷ್ಟು ಜನರಿಗೆ ಸಿ.ಎ. ನಿವೇಶನ ನೀಡಲಾಗಿದೆ ; ಹೀಗೆ ಸಿ.ಎ. ನಿವೇಶನ ನೀಡುವಾಗ ಅನುಸರಿಸಿದ ಮಾನದಂಡಗಳು ಯಾವುವು ;

(ಊ) ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಈಗಾಗಲೇ ನೀಡಲಾದ ಸಿ.ಎ. ನಿವೇಶನಗಳನ್ನು ನೀಡಲಾದ ಉದ್ದೇಶಕ್ಕೆ ಬಳಸಿಕೊಂಡಿರುವುದನ್ನು ಖಾತರಿಪಡಿಸಿಕೊಳ್ಳಲಾಗಿದೆಯೇ ; ಕೈಗಾರಿಕಾ ಉದ್ದೇಶಳಿಗೆ ಬಳಸಿಕೊಂಡಿರದ ನಿವೇಶನಗನ್ನು ಹಿಂಪಡೆದು ಮರುಹಂಚಿಕೆ ಮಾಡಲಾಗಿದೆಯೇ ; ಈ ಕುರಿತು ಕೈಗೊಂಡ ಕ್ರಮಗಳೇನು ?

# ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಯೋಜನೆಗಳ ವಿವರ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೧೦ (೧೧) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ೨೦೨೪–೨೫ನೇ ಸಾಲಿನಲ್ಲಿ ಮೂಲಭೂತ ಸೌಲಭ್ಯಗಳಿಗೆ ಯಾವ ಯಾವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಯೋಜನೆಗಳನ್ನು ರೂಪಿಸಲಾಗಿದೆ ; (ವಿವರ ನೀಡುವುದು)

(ಆ) ಇವುಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ; ಬಿಡುಗಡೆಯಾಗಿರುವ ಹಣದಲ್ಲಿ ಯಾವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ; (ವಿವರ ನೀಡುವುದು)

(ಇ) ರಾಜ್ಯದ ಕೆಲವೊಂದು ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಕಾಮಗಾರಿಗಳನ್ನು ಪೂರ್ಣಗೊಳಿಸದೆ ಇರಲು ಕಾರಣಗಳೇನು ? (ವಿವರ ನೀಡುವುದು)

# ಯಾದಗಿರಿ ಜಿಲ್ಲೆಯ ಕಡೆಚೂರು–ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿನ ಕೆಮಿಕಲ್ ತ್ಯಾಜ್ಯ ಕಂಪನಿಗಳಿಂದ ಉಂಟಾಗಿರುವ ಪರಿಸರ ಮಾಲಿನ್ಯ ಮತ್ತು ಅದರ ಪರಿಣಾಮಗಳ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೧೧ (೦೭) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಾದಗಿರಿ ಜಿಲ್ಲೆಯ ಕಡೇಚೂರು–ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿನ ರಾಸಾಯನಿಕ ಕೈಗಾರಿಕೆಗಳಿಂದ ಹೊರಹೊಮ್ಮುತ್ತಿರುವ ವಿಷಗಾಳಿ ಮತ್ತು

ಅದರಿಂದ ಉಂಟಾಗಿರುವ ಮಾರಕ ರೋಗಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಜಿಲ್ಲಾ ಕೇಂದ್ರದಿಂದ ೩೮ ಕಿ.ಮೀ. ದೂರದಲ್ಲಿರುವ ಕಡೇಚೂರು–ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿನ ರಾಸಾಯನಿಕ ತ್ಯಾಜ್ಯದಿಂದ ಸುತ್ತಲಿನ ೧೫ಕ್ಕೂ ಹೆಚ್ಚು ಗ್ರಾಮಗಳು ಮತ್ತು ಅಲ್ಲಿ ವಾಸಿಸುತ್ತಿರುವ ಜನರ ಮೇಲಿನ ವ್ಯತಿರಿಕ್ತ ಪರಿಣಾಮಗಳಿಂದ ಅಪಾಯಕಾರಿಯಾಗಿ ಜೀವ ಹಾನಿ ಸಂಭವಿಸಿರುವುದಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು ;

(ಇ) ಕೋಕಾ ಕೋಲಾ, ಜವಳಿ ಪಾರ್ಕ್‌ನಂತಹ ಕೈಗಾರಿಕೆಗಳು ಬಂದು ಜನರ ಜೀವನ ಉದ್ಧಾರವಾಗುತ್ತದೆ, ಎಂದು ನಂಬಿರುವ ಜನರು ಮಾರಕ ರೋಗಗಳಿಗೆ ತುತ್ತಾಗಿ, ಜೀವಿತಾವಧಿ ಕಡಿಮೆಯಾಗಿದ್ದು ಇಂತಹ ನರಕ ಜೀವನ ತಪ್ಪಿಸಲು ಸರ್ಕಾರದಿಂದ ಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುವುದು;

(ಈ) ಡಿಸೆಂಬರ್ ೨೦೨೪ರಲ್ಲಿ ಪರಿಸರ ಮಂಡಳಿಯ ತಾಂತ್ರಿಕ ಸಮಿತಿ ವರದಿ ನೀಡಿದ್ದರೂ ಅದರ ಶಿಫಾರಸ್ಸನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದ ಅಧಿಕಾರಿಗಳ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು;

(ಉ) ಇದೂ ಅಲ್ಲದೆ ಇನ್ನು ೩೪ ಫಾರ್ಮಾ ಕಂಪನಿಗಳ ಸ್ಥಾಪನೆಗೆ ಅರ್ಜಿ ಹಾಕಿರುವುದರಿಂದ ಇವುಗಳಿಂದ ಆಗಬಹುದಾದ ಹಾನಿಯ ಕುರಿತು ಜನರು ಭಯಭೀತರಾಗಿದ್ದು, ಇದಕ್ಕೆ ಯಾವ ರೀತಿಯ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವುದು?

## ಅಡಿಕೆ ತೋಟಗಳಿಗೆ ಎಲೆಚುಕ್ಕೆ ರೋಗ ವ್ಯಾಪಕವಾಗಿ ಹರಡಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀಮತಿ ಬಾಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೧೨ (೯೧+೮೬) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಲೆನಾಡು, ಕರಾವಳಿ ಹಾಗೂ ಶಿವಮೊಗ್ಗ ಭಾಗದ ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆಗೆ ಎಲೆಚುಕ್ಕಿ ಕೀಟ ಬಾಧೆ ಎದುರಾಗಿದ್ದು, ಅಡಿಕೆ ತೋಟಗಳಿಗೆ ಎಲೆಚುಕ್ಕಿ ರೋಗ ಕಾಣಿಸಿಕೊಂಡು, ವ್ಯಾಪಕವಾಗಿ ಮತ್ತು ಅತ್ಯಂತ ವೇಗವಾಗಿ ಹರಡಿರುವುದರಿಂದ ದೊಡ್ಡ ಪ್ರಮಾಣದಲ್ಲಿ ಬೆಳೆ ನಷ್ಟವಾಗಿ ಅಡಿಕೆ ಬೆಳೆಗಾರರು ಆರ್ಥಿಕವಾಗಿ ಅತ್ಯಂತ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಯಾವುದೇ ಪರಿಣಾಮಕಾರಿಯಾದ ನಿಯಂತ್ರಣದ ಕ್ರಮಗಳನ್ನು ಸಕಾಲದಲ್ಲಿ ಕೈಗೊಳ್ಳದ ಕಾರಣದಿಂದಾಗಿ ಗಿಡಗಳು ಸಾಯುತ್ತಿದ್ದು ಇದರಿಂದಾಗಿ ಇಡೀ ತೋಟಗಳೇ ಸಂಪೂರ್ಣವಾಗಿ ನಾಶವಾಗುತ್ತಿರುವುದನ್ನು ತಡೆಯಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು;

(ಇ) ಬ್ಯಾಕ್ಟೀರಿಯಾ, ಪಂಗಸ್‌ಗಳಿಂದ ಈ ರೋಗ ಕಂಡು ಬರುತ್ತಿದ್ದರೂ, ಈ ರೋಗವನ್ನು ಎಲ್ಲಾ ಕಡೆಗೆ ಹರಡಲು ಒಂದು ಸಣ್ಣದಾದ ಕೀಟ ಕಾರಣವಾಗಿದ್ದು, ಇದನ್ನು ನಿಯಂತ್ರಿಸಲು ಅಗತ್ಯ ಕ್ರಮ ವಹಿಸದಿದ್ದರೇ ಇಡೀ ಅಡಿಕೆ ಕೃಷಿಯೇ ಸಂಪೂರ್ಣವಾಗಿ ನಾಶವಾಗುವ ಸಾಧ್ಯತೆ ಇರುವುದರಿಂದ ಈ ಕುರಿತು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು;

(ಈ) ಎಲೆಚುಕ್ಕೆ ರೋಗದ ನಿಯಂತ್ರಣಕ್ಕೆ ಕೂಡಲೇ ಸಂಶೋಧನಾ ಪರಿಹಾರ ಕಂಡುಕೊಳ್ಳದಿದ್ದರೆ ಅಡಿಕೆ ಬೆಳೆಗಾರರು ಅತ್ಯಂತ ಸಂಕಷ್ಟದ ಪರಿಸ್ಥಿತಿಗೆ ಶಾಶ್ವತವಾಗಿ ಸಿಲುಕುವ ವಾತಾವರಣ ನಿರ್ಮಾಣವಾಗಿದ್ದು, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಉ) ಅಡಿಕೆ ಬೆಳೆಗೆ ಎಲೆಚುಕ್ಕಿ ರೋಗದಿಂದ ಬೆಳೆ ನಷ್ಟಕ್ಕೆ ಪರಿಹಾರವಾಗಿ ರೈತರಿಗೆ ಸರ್ಕಾರದಿಂದ ನೆರವು ನೀಡಲಾಗುತ್ತಿದ್ದೆಯೇ; ನೀಡಿದ್ದಲ್ಲಿ, ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ; (ವಿವರ ನೀಡುವುದು)

(ಊ) ಅಡಿಕೆ ಬೆಳೆಗೆ ಎಲೆಚುಕ್ಕಿ ರೋಗದಿಂದ ನಷ್ಟವಾದ ಎಷ್ಟು ರೈತರಿಗೆ ವಿಮಾ ಕಂಪನಿಗಳಿಂದ ಪರಿಹಾರ ನೀಡಲಾಗಿದೆ; ಒಂದು ಎಕರೆಗೆ ಎಷ್ಟು ಪರಿಹಾರವನ್ನು ನೀಡಲಾಗುತ್ತಿದೆ? (ತಾಲ್ಲೂಕುವಾರು ವಿವರ ನೀಡುವುದು)

## ಜವಳಿ ಕ್ಷೇತ್ರದ ಸಮಸ್ಯೆಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೩ (೭೦) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜವಳಿ ಕ್ಷೇತ್ರವನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಹೊಸ ನೀತಿಗಳು ಯಾವುವು;

(ಆ) ರಾಜ್ಯದಲ್ಲಿ ಜವಳಿ ಕೈಗಾರಿಕೆಗಳಿಗೆ ಸರ್ಕಾರದ ವತಿಯಿಂದ ನೀಡುತ್ತಿರುವ ಸಬ್ಸಿಡಿಗಳು ಯಾವುವು;

(ಇ) ತಮಿಳುನಾಡು ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳು ಜವಳಿ ಕೈಗಾರಿಕೆಗಳಿಗೆ ಹೆಚ್ಚಿನ ವಿದ್ಯುತ್ ಸಬ್ಸಿಡಿಗಳನ್ನು ನೀಡುತ್ತಿರುವುದು ನಿಜವೇ; ಹಾಗಿದ್ದಲ್ಲಿ ರಾಜ್ಯದಲ್ಲಿ ಜವಳಿ ಕೈಗಾರಿಕೆಗಳಲ್ಲಿ ಸಮನಾಂತರ ಸಬ್ಸಿಡಿಗಳನ್ನು ನೀಡಲು ಆಗುತ್ತಿರುವ ಅಡಚಣೆಗಳೇನು;

(ಈ) ಜವಳಿ ನೀತಿ ೨೦೨೫–೨೦೩೦ರಡಿ ರಾಜ್ಯದಲ್ಲಿ ನಿರುದ್ಯೋಗಿಗಳಿಗೆ ಸುಮಾರು ೨ ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲು ಯೋಜಿಸಿದ್ದು, ಈ ಯೋಜನೆಯ ಪ್ರಸ್ತುತ ಹಂತವೇನು?

## 'ಇನ್ವೆಸ್ಟ್ ಕರ್ನಾಟಕ ೨೦೨೫' ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೧೪ (೭೭) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) 'ಇನ್ವೆಸ್ಟ್ ಕರ್ನಾಟಕ ೨೦೨೫' ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕಾಗಿ ಸರ್ಕಾರದಿಂದ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ಹಾಗೂ ಕಳೆದ ಸಾಲಿನ ಸಮಾವೇಶದ ವೆಚ್ಚದ ಮೊತ್ತದ ವಿವರಗಳನ್ನು ಒದಗಿಸುವುದು;

(ಆ) ಈ ಸಾಲಿನ ಸಮಾವೇಶದಲ್ಲಿ ಭಾಗವಹಿಸಿದ ಕಂಪನಿಗಳು ಯಾವುವು; ಎಷ್ಟು ಕಂಪನಿಗಳು ರಾಜ್ಯದಲ್ಲಿ ಬಂಡವಾಳ ಹೂಡಲು ಒಡಂಬಡಿಕೆ ಸಹಿ ಮಾಡಿದ್ದಾರೆ; (ಕಂಪನಿಯ ವಿವರಗಳು ಬಂಡವಾಳದ ಮೊತ್ತ ಹಾಗೂ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಕಂಪನಿ ಪ್ರಾರಂಭಿಸುವ ಉದ್ದೇಶ ಹೊಂದಿರುವ ವಿವರ ನೀಡುವುದು)

(ಇ) ಬಂಡವಾಳ ಹೂಡುವ ಕಂಪನಿಗಳಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗುವುದು; ಎಷ್ಟು ಉದ್ಯೋಗಗಳ ಸೃಷ್ಟಿಯಾಗಬಹುದು;

(ಈ) ಈ ಹಿಂದೆ ನಡೆದಂತಹ ಸಮಾವೇಶದಲ್ಲಿ ಒಡಂಬಡಿಕೆಗೆ ಸಹಿ ಮಾಡಿರುವ ಕಂಪನಿಗಳು ಪ್ರಾರಂಭಗೊಂಡಿದೆಯೇ; ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿದೆ;

(ಉ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ೩೦ಕ್ಕೂ ಅಧಿಕ ಕಂಪನಿಗಳು ಮುಂದೆ ಬಂದಿದ್ದು, ಅವರಿಗೆ ಜಮೀನು ನೀಡಲು ಜಿಲ್ಲಾಡಳಿತದಲ್ಲಿ ಜಮೀನು ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಬಾಗಲಕೋಟೆ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೈಗಾರಿಕಾ ಪ್ರದೇಶದ ಜಮೀನುಗಳು ಲಭ್ಯವಿದ್ದು, ಇದನ್ನು ಬಳಸಿಕೊಳ್ಳಲಾಗುತ್ತಿದೆಯೇ?

## ಕೈಗಾರಿಕೆಗಳ ಸ್ಥಾಪನೆಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೫ (೧೧೮) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಯ ಸ್ಥಾಪನೆಗಾಗಿ ರಾಜ್ಯದಲ್ಲಿ ಎಷ್ಟು ಮೊತ್ತದ ಹೂಡಿಕೆಯನ್ನು ಆಕರ್ಷಿಸಲು ಸಫಲವಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಹೂಡಿಕೆಯಿಂದ ರಾಜ್ಯದಲ್ಲಿ ಎಷ್ಟು ಸಂಖ್ಯೆಯ ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ; (ವಿವರ ನೀಡುವುದು)

(ಇ) ವಿಜಯಪುರ ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಯ ನಿರುದ್ಯೋಗಿ ಯುವಕ/ಯುವತಿಯರಿದ್ದು ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅಗತ್ಯ ಮೂಲಭೂತ ಸೌಕರ್ಯ ಹಾಗೂ ಮಾನವ ಸಂಪನ್ಮೂಲಗಳು ಲಭ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ವಿಜಯಪುರ ಜಿಲ್ಲೆಯಲ್ಲಿ ಎಷ್ಟು ಸಂಖ್ಯೆಯ ಕೈಗಾರಿಕೆಗಳನ್ನು ಸ್ಥಾಪಿಸಲು ಹೂಡಿಕೆಗಳನ್ನು ಆಕರ್ಷಿಸಿದೆ;

(ಉ) ಇದರಿಂದಾಗಿ ಜಿಲ್ಲೆಯ ಎಷ್ಟು ನಿರುದ್ಯೋಗಿ ಯುವಕ/ಯುವತಿಯರಿಗೆ ಉದ್ಯೋಗ ದೊರಕಿದೆ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಕಾ.ಸೂ. 647 /ಪಿ5